KAHS010023172026

Presented on : 09-03-2026
Registered on : 09-03-2026
Decided on : 18-03-2026
Duration : 9 days

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾಸನ

**ದಿನಾಂಕ 18 ನೇ ಮಾರ್ಚ 2026**

ಉಪಸ್ಥಿತರು
ಶ್ರೀಮತಿ ಹೇಮಾವತಿ, ಬಿಬಿಎಂ. ಎಲ್.ಎಲ್.ಬಿ.
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾಸನ.

**Crl.Misc. No.230/2026**

| | |
|---|---|
| ಅರ್ಜಿದಾರರುಃ | ಪಾಂಡುರಂಗ ಸಿದ್ದರಾಮ ಮಡಿವಾಳ,<br>ಬಿನ್ ಸಿದ್ದರಾಮ ಮಲಕಣ್ಣ ಆಗಸರ,<br>ಸುಮಾರು 26 ವರ್ಷ,<br>ಬದೋರ್ೀಲ್ ಗ್ರಾಮ,<br>ಇಂಡಿ ಹೋಬಳಿ,<br>ಚಡಚಣ ತಾಲ್ಲೂಕು,<br>ಬಿಜಾಪುರ ಜಿಲ್ಲೆ.<br><br>(ಪ್ರತಿನಿಧಿಸುವವರು ಶ್ರೀ. ಟಿ.ಎಸ್. ಸುರೇಶಕುಮಾರ್ ವಕೀಲರು) |

ವಿರುದ್ದ

| | |
|---|---|
| ಎದುರುದಾರರುಃ | ರಾಜ್ಯದ ಪರ ಹಾಸನ ಬಡಾವಣೆ ಪೊಲೀಸರು<br><br>(ಪ್ರತಿನಿಧಿಸುವವರು ಸರ್ಕಾರಿ ಅಭಿಯೋಜಕರು) |

# ಆದೇಶ

ಅರ್ಜಿದಾರರು ಈ ಅರ್ಜಿಯನ್ನು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 483 ರಡಿಯಲ್ಲಿ ಸಲ್ಲಿಸಿದ್ದು ಎದುರುದಾರರು ಠಾಣಾ ಮೊಕದ್ದಮೆ ಸಂ.289/2025 ರಲ್ಲಿ ಆತನ ವಿರುದ್ಧ ಮಾದಕ ದ್ರವ್ಯಗಳು ಮತ್ತು ಮನೋವಿಕೃತ ವಸ್ತುಗಳ ಕಾಯ್ದೆ ಕಲಂ 20(ಬಿ)ರನ್ವಯ ದಾಖಲಾದ ಪ್ರಕರಣದಲ್ಲಿ ಆತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಕೆಳಗಿನಂತಿದೆ.

ಅ) ಎದುರುದಾರ ಪೋಲಿಸರು ಠಾಣಾ ಮೊ.ಸಂ.289/2025 ರಲ್ಲಿ ಎನ್.ಡಿ.ಪಿ.ಎಸ್. ಕಾಯ್ದೆ ಕಲಂ 20(ಬಿ)ರನ್ವಯ ಅರ್ಜಿದಾರರ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದು ಸದರಿ ದೂರಿನಲ್ಲಿ ಈ ಫಿರ್ಯಾದುದಾರರು ಗುಂಡೇಗೌಡನಕೊಪ್ಪಲು, ವಿವೇಕನಗರದ ಕಡೆ ಗಸ್ತು ಕರ್ತವ್ಯದಲ್ಲಿದ್ದಾಗ ಬಾತ್ಮಿದಾರರು ನೀಡಿದ ಮಾಹಿತಿ ಮೇರೆಗೆ ವಿವೇಕನಗರದ ಲ್ಯಾಂಡ್ ಆರ್ಮಿ ಕಛೇರಿಯ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಹೋಗಿ ನೋಡಿದಾಗ ಅಲ್ಲಿ ಕೋಳಿ ಅಂಗಡಿಯ ಪವನ ಮತ್ತು ಮಧನ ಎಂಬುವವರು ಮಾಧಕ ವಸ್ತುಗಳಾದ ಗಾಂಜಾ ಸೊಪ್ಪನ್ನು ಕವರಿನಲ್ಲಿಟ್ಟುಕೊಂಡು

ಸಾರ್ವಜನಿಕರಿಗೆ ಮಾರಾಟ ಮಾಡುತ್ತಿರುತ್ತಾರೆ ಎಂಬ ಅಪಾಧನೆಯಾಗಿರುತ್ತದೆ.

(ಆ) ಮುಂದುವರೆದು ಅರ್ಜಿದಾರರು ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ. ರಾಜಕೀಯ ದ್ವೇಷದಿಂದ ಮತ್ತು ಒತ್ತಡದಿಂದ ಎದುರುದಾರರು ಆತನನ್ನು ಈ ಪ್ರಕರಣದಲ್ಲಿ ಸಿಲುಕಿಸಿರುತ್ತಾರೆಂದು ಹೇಳುತ್ತಾರೆ. ಅರ್ಜಿದಾರರು ಉತ್ತಮ ರೈತ ಕುಟುಂಬದ ಹಿನ್ನೆಲೆಯಿಂದ ಬಂದವರಾಗಿದ್ದು ಸಮಾಜದಲ್ಲಿ ಉನ್ನತ ನಡೆಯುಳ್ಳ ನಾಗರೀಕರಾಗಿರುತ್ತಾರೆ. ಅರ್ಜಿದಾರರು ದಿನಾಂಕ 19.02.2026 ರಿಂದ ನ್ಯಾಯಾಂಗ ಬಂಧನದಲ್ಲಿರುತ್ತಾರೆ. ಅರ್ಜದಾರರು ಯಾವುದೇ ಕ್ರಿಮಿನಲ್ಲಿ ಪ್ರಕರಣದಲ್ಲಿ ಬಾಗಿಯಾಗಿರುವುದಿಲ್ಲ. ಅವರು ತಮ್ಮ ಕುಟುಂಬದ ಏಕೈಕ ದುಡಿಮೆದಾರರಾಗಿದ್ದು ಅವರಿಗೆ ವಯಸ್ಸಾದ ತಂದೆ ತಾಯಿಗಳಿದ್ದು ಅವರ ಹಾಗುಹೋಗುಗಳನ್ನು ಇವರೇ ನೋಡಿಕೊಳ್ಳಬೇಕಾಗಿರುತ್ತದೆ. ಅರ್ಜಿಯ ಶಿರೋನಾಮೆಯಲ್ಲಿ ಕಾಣಿಸಿದ ಸ್ಥಳದಲ್ಲಿ ಅವರು ವಾಸಿಸುತ್ತಿರುತ್ತಾರೆ. ಇವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡದೇ ಇದ್ದಲ್ಲಿ ಇವರನ್ನೆ ಅವಲಂಭಿಸಿರುವ ಕುಟುಂಬವು ಬೀದಿ ಪಾಲಾಗುವ ಸಾಧ್ಯತೆ ಇರುತ್ತದೆ ಹಾಗೂ ಕುಟುಂಬಕ್ಕೆ ತೀವ್ರ ತರಹದ ಕಷ್ಟನಷ್ಟಗಳು ಉಂಟಾಗುತ್ತವೆ. ಇವರ ವಿರುದ್ದ ಯಾವುದೇ

ಪ್ರತ್ಯಕ್ಷ ಸಾಕ್ಷಿಗಳು ಇರುವುದಿಲ್ಲ. ನ್ಯಾಯಾಲಯ ವಿಧಿಸುವ ಎಲ್ಲಾ ಷರತ್ತುಗಳನ್ನು ತಪ್ಪದೇ ಪಾಲಿಸಲು ಬದ್ಧರಾಗಿದ್ದಾರೆ. ಮೇಲ್ಕಂಡ ಕಾರಣಗಳಿಂದ ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಬೇಕೆಂದು ಕೇಳಿರುತ್ತಾರೆ.

3. ಮಾನ್ಯ ಸರ್ಕಾರಿ ಅಭಿಯೋಜಕರು ಸಲ್ಲಿಸಿದ ತಕರಾರಿನಲ್ಲಿ ಈ ಜಾಮೀನು ಅರ್ಜಿಯು ನ್ಯಾಯಸಮ್ಮತವೂ ಹಾಗೂ ಕಾನೂನಿನ ಅಡಿಯಲ್ಲಿ ಊರ್ಜಿತವಾಗಿಲ್ಲವೆಂದು ಹೇಳುತ್ತಾರೆ. ಅರ್ಜಿದದಾರರ ಮೇಲಿನ ಅಪಾಧನೆಗೆ ಸಂಬಂಧಿಸಿದಂತೆ ಸಾಕಷ್ಟು ಸಾಕ್ಷಾಧಾರಗಳನ್ನು ಈಗಾಗಲೇ ಕಲೆ ಹಾಕಿರುತ್ತಾರೆ ಮತ್ತು ತನಿಖೆಯು ಪ್ರಾಥಮಿಕ ಹಂತದಲ್ಲಿರುತ್ತದೆ. ಈ ಹಂತದಲ್ಲಿ ಇವರನ್ನು ಬಿಡುಗಡೆಗೊಳಿಸಿದ್ದಲ್ಲಿ ಅರ್ಜಿದಾರರು ತಲೆಮರೆಸಿಕೊಳ್ಳುವ ಸಾಧ್ಯತೆಯಿರುತ್ತದೆ ಮತ್ತು ಇಂತಹದೇ ಗಂಭೀರ ಮತ್ತು ತೀವ್ರ ಸ್ವರೂಪದ ಅಪರಾಧವನ್ನು ಪುನರಾವರ್ತಿಸುವ ಸಂಭವವಿರುತ್ತದೆ. ಇದೇ ರೀತಿ ಪದೇ ಪದೇ ಮಾಧಕ ವಸ್ತುಗಳನ್ನು ಮಾರಾಟ ಮಾಡಿದಲ್ಲಿ ವ್ಯಸನಿಗಳ ಸಂಖ್ಯೆ ಹೆಚ್ಚಾಗುತ್ತದೆ ಹಾಗೂ ತನಿಖೆಯ ಮುಂದಿನ ಹಂತಕ್ಕೆ ಆಡ್ಡಿಯುಂಟಾಗುತ್ತದೆ ಮತ್ತು ಸಾಕ್ಷಿದಾರರಿಗೆ ಆಮಿಷ ಒಡ್ಡುವ ಸಾಧ್ಯತೆಯಿರುತ್ತದೆ. ಆದಕಾರಣ

ಅರ್ಜಿದಾರನು ಸಲ್ಲಿಸಿರುವ ಜಾಮೀನು ಅರ್ಜಿಯನ್ನು ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

4. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು.

5. ಈ ಕೆಳಕಂಡ ಅಂಶಗಳು ನನ್ನ ಗಮನಕ್ಕೆ ಬಂದಿರುತ್ತದೆ.

1) ಅರ್ಜಿದಾರನು ಸಲ್ಲಿಸಿರುವ ಜಾಮೀನು ಅರ್ಜಿಯನ್ನು ಪುರಸ್ಕರಿಸಬಹುದೇ?
2) ಏನು ಆದೇಶ?

6. ಈ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತಿದೆ.

ಅಂಶ.1: ಸಕರಾತ್ಮಕ,
ಅಂಶ.2: ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿ

ಕಾರಣಗಳು

7. **ಅಂಶ.1:** ಈ ಪ್ರಕರಣದಲ್ಲಿ ಅರ್ಜಿದಾರರ ಮೇಲಿರುವ ಅಪಾಧನೆ ಏನೇಂದರೆ ದಿನಾಂಕ 16.12.2025 ರಂದು ಹಾಸನ ಬಡಾವಣೆ ಠಾಣೆಯ ಪಿ.ಎಸ್.ಐ. ವಿನಯ್ ಕುಮಾರ್ ಸಿ.ರವರು ಎಂ.ಜಿ.ರಸ್ತೆಯ ವಿದ್ಯಾನಗರ, ಗುಂಡೇಗೌಡನ ಕೊಪ್ಪಲು, ವಿವೇಕನಗರದ ಕಡೆ ಗಸ್ತು ಕರ್ತವ್ಯದಲ್ಲಿದ್ದಾಗ ಮಧ್ಯಾಹ್ನ 4.15 ಗಂಟೆಗೆ ಬಂದ ಮಾಹಿತಿಯ ಮೇರೆಗೆ ವಿವೇಕನಗರ ಲ್ಯಾಂಡ್ ಆರ್ಮಿ ಕಛೇರಿಯ ಹತ್ತಿರ ಹೋಗಿ ನೋಡಿದಾಗ ಆರೋಪಿತರು ಪ್ಲಾಸ್ಟಿಕ್ ಕವರಿನಲ್ಲಿದ್ದ ಮಾಧಕ

ವಸ್ತುಗಳಾದ ಗಾಂಜಾ ಸೊಪ್ಪನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿರುವುದು ಕಂಡು ಬಂದಿದ್ದು ಅದರಲ್ಲಿ ಒಬ್ಬ ವ್ಯಕ್ತಿ ಓಡಿಹೋಗಿದ್ದು ನಂತರ ಆರೋಪಿಯ ವಶದಲ್ಲಿದ್ದ ಒಣಗಾಂಜಾ ಸೊಪ್ಪಿನ ಬಗ್ಗೆ ವಿಚಾರ ಮಾಡಿದಾಗ ಅದನ್ನು ಸೇವನೆ ಮಾಡಲು ಈ ಅರ್ಜಿದಾರನಿಂದ ಖರೀದಿ ಮಾಡಿದ್ದುದಾಗಿ ತಿಳಿಸಿರುತ್ತಾರೆ ಮತ್ತು ಆರೋಪಿ ಪವನ್ ಗಾಂಜಾ ಸೊಪ್ಪನ್ನು ತೂಕ ಮಾಡಿಕೊಟ್ಟು ಉಳಿಕೆ ಗಾಂಜಾ ಸೊಪ್ಪು ಮತ್ತು ತೂಕದ ಯಂತ್ರವನ್ನು ವಾಪಸ್ಸು ತೆಗೆದುಕೊಂಡು ಹೋಗಿರುತ್ತಾನೆ. ಆತನ ಬಳಿಯಿದ್ದ ಪ್ಲಾಸ್ಟಿಕ್ ಕವರನ್ನು ತೂಕ ಮಾಡಿದಾಗ ಸುಮಾರು 36 ಗ್ರಾಂ ಇರುವುದು ಕಂಡು ಬಂದಿದೆ ಎಂಬುದಾಗಿರುತ್ತದೆ.

8. ಈ ಅರ್ಜಿದಾರರು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಜಾಮೀನು ಅರ್ಜಿಯನ್ನು ಸಲ್ಲಿಸಿದ್ದು ಅದನ್ನು ಜೆ.ಎಂ.ಎಫ್.ಸಿ. ನ್ಯಾಯಾಲಯ ವಜಾಗೊಳಿಸಿರುವುದು ಕಂಡುಬಂದಿರುತ್ತದೆ. ತನಿಖಾಧಿಕಾರಿಯು ಹಾಜರುಪಡಿಸಿರುವ ವರದಿಯನ್ನು ಪರಿಶೀಲಿಸಿದಾಗ ಈತನನ್ನು 19.02.2026 ರಂದು ವಶಕ್ಕೆ ಪಡೆದಿದ್ದು ಆತನನ್ನು ವಿಚಾರಣೆ ನಡೆಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುವುದು ಕಂಡು ಬರುತ್ತದೆ. ಅರ್ಜಿದಾರನು ಗಾಂಜಾ ಸೊಪ್ಪನ್ನು ಬೆಳೆದು ಮಾರಾಟ

ಮಾಡುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ವಿಚಾರಣಾ ಹಂತದಲ್ಲಿ ನೋಡಬೇಕಾಗುತ್ತದೆ. ಆರೋಪಿ ಪವನ್‌ರವರ ಸ್ವಇಚ್ಛಾ ಹೇಳಿಕೆಯಂತೆ ಆತನು ತೋರಿಸಿದ ಗಾಂಜಾ ತೂಕದ ಯಂತ್ರ ಮತ್ತು ಕಾರನ್ನು ವಶಪಡಿಸಿಕೊಳ್ಳಲಾಗಿದೆ ಎಂಬುದು ಕಂಡು ಬಂದಿರುತ್ತದೆ. ಈ ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ ಅರ್ಜಿದಾರನ ಅವಶ್ಯಕತೆ ತನಿಖೆಗೆ ಇಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ತನಿಖಾಧಿಕಾರಿಯುವರ ವರದಿಯಲ್ಲೂ ಕೂಡ ಆತನ ಬಳಿ ಎಷ್ಟು ತೂಕದ ಗಾಂಜವನ್ನು ವಶಪಡಿಸಿಕೊಳ್ಳಲಾಗಿದೆ ಎನ್ನುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

೯. ಮಾನ್ಯ ಸರ್ಕಾರಿ ಅಭಿಯೋಜಕರು ಸಲ್ಲಿಸಿದ ತಕರಾರು ಮತ್ತು ತನಿಖಾಧಿಕಾರಿಯವರ ವರದಿಯನ್ನು ಪರಿಶೀಲಿಸಿದಾಗ ಈತನು ದೊಡ್ಡ ತೂಕದ ಗಾಂಜಾವನ್ನು ಹೊಂದಿರಲಿಲ್ಲ ಎಂಬುದು ಕಂಡುಬಂದಿರುತ್ತದೆ. ಆತನ ಮೇಲೆ ಹೊರಿಸಿರುವ ಅಪಾಧನೆಯು ಮರಣ ದಂಡನೆ ಅಥ,ವಾ ಜೀವಾವಧಿ ಶಿಕ್ಷೆಗೆ ಒಳಪಡುವ ಪ್ರಕರಣವಲ್ಲ. ಇತನು ಬರ್ದೋಲ್ ಗ್ರಾಮದ ಬಿಜಾಪುರ ಜಿಲ್ಲೆಯಲ್ಲಿ ವಾಸ ಮಾಡುತ್ತಿರುತ್ತಾರೆ. ಆದ್ದರಿಂದ ಈತನ ಹಾಜರಾತಿಯನ್ನು ಷರತ್ತುಗಳನ್ನು ವಿಧಿಸುವ ಮೂಲಕ ಮುಂದಿನ ದಿನಗಳಲ್ಲಿ ಯಾವುದೇ ತೊಂದರೆ ಇಲ್ಲದೇ ಪಡೆಯಬಹುದಾಗಿರುತ್ತದೆ. ಅಭಿಯೋಜನೆಯ ವ್ಯಕ್ತ ಪಡಿಸಿರುವ

ಸಂದೇಹವನ್ನು ಸೂಕ್ತ ಷರತ್ತುಗಳನ್ನು ವಿಧಿಸುವ ಮೂಲಕ ಪರಿಹರಿಸಿ ಕೊಳ್ಳಬಹುದಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ಈತನು ಸಲ್ಲಿಸಿರುವ ಜಾಮೀನು ಅರ್ಜಿಯನ್ನು ಪುರಸ್ಕರಿಸಲು ಸಕಾರಣ ಇದೆಯೆಂದು ಅಭಿಪ್ರಾಯಪಟ್ಟಿರುತ್ತೇನೆ. ಆದಕಾರಣ ಮೇಲ್ಕಂಡ ಅಂಶವನ್ನು ಸಕರಾತ್ಮಕವಾಗಿ ಉತ್ತರಿಸಿರುತ್ತೇನೆ.

10. ಅಂಶ.**2**: ಮೇಲ್ಕಂಡ ಕಾರಣಗಳಿಗೋಸ್ಕರ, ಈ ಕೆಳಕಂಡಂತೆ ಆದೇಶ ಮಾಡುತ್ತಿದ್ದೇನೆ.

ಆದೇಶ

ಅರ್ಜಿದಾರರು ಸಲ್ಲಿಸಿರುವ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಎದುರುದಾರರು ಠಾಣಾ ಮೊಕದ್ದಮೆ ಸಂ.289/2025 ರಲ್ಲಿ ಅರ್ಜಿದಾರನನ್ನು ಬಂಧಿಸಿದಲ್ಲಿ ಆತನಿಂದ ರೂ.50,000/-ಕ್ಕೆ ಒಂದು ಜಾಮೀನು ಮುಚ್ಚಳಿಕೆಯನ್ನು ಪಡೆದುಕೊಂಡು ಅಷ್ಟೇ ಮೊತ್ತಕ್ಕೆ ಒಬ್ಬ ಯೋಗ್ಯ ಜಾಮೀನುದಾರರನ್ನು ಸಹ ನೀಡತಕ್ಕದ್ದು. ಮಾತ್ರವಲ್ಲದೆ, ಅರ್ಜಿದಾರನು ಈ ಕಳಗಿನ ಷರತ್ತುಗಳನ್ನು ಪಾಲಿಸತಕ್ಕದ್ದು.

1) ಅರ್ಜಿದಾರರು ಪ್ರಾಸಿಕ್ಯೂಷನ್ ಸಾಕ್ಷಿಗಳನ್ನು ತಿರುಚಬಾರದು.

2) ಅರ್ಜಿದಾರರು ಪೂರ್ವಾನುಮತಿ ಇಲ್ಲದೆ ನ್ಯಾಯಾಲಯದ ವ್ಯಾಪ್ತಿಯನ್ನು ಬಿಡಬಾರದು.

3) ಅರ್ಜಿದಾರರು ಎಲ್ಲಾ ವಿಚಾರಣೆಯ ದಿನಾಂಕಗಳಲ್ಲಿ ನ್ಯಾಯಾಲಯದ ಮುಂದೆ ಹಾಜರಾಗಬೇಕು.

4) ಅರ್ಜಿದಾರರು ಯಾವುದೇ ಅಪರಾಧ ಮಾಡಬಾರದು.

5) ಪ್ರಕರಣದ ವಿಚಾರಣೆಯ ಸಮಯದಲ್ಲಿ ಅರ್ಜಿದಾರರು ಜಾಮೀನಿನ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದರೆ, ಅವರ ಪರವಾಗಿ ನೀಡಲಾದ ಜಾಮೀನು ರದ್ದಾಗುತ್ತದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚಾದ ನಂತರ ಅದನ್ನು ಓದಿ ತಪ್ಪುಗಳನ್ನು ತಿದ್ದುಪಡಿ ಮಾಡಿ ಇಂದು 18 ನೇ ಮಾರ್ಚ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

(ಹೇಮಾವತಿ),
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾಸನ.